# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 36 |
| ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 29-01-2021 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಶಾಲಾ ಪೂರ್ವ ಮಕ್ಕಳ ಊಟದ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು; ರಾಜ್ಯಾದ್ಯಂತ ಈ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು). | ರಾಜ್ಯಾದ್ಯಂತ ಶಾಲಾ ಪೂರ್ವ ಮಕ್ಕಳ ಊಟದ ಯೋಜನೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ಫಲಾನುಭವಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ 1 ಮತ್ತು 2ರಲ್ಲಿ** ಒದಗಿಸಿದೆ. |
| ಆ. | ಶಾಲಾ ಪೂರ್ವ ಮಕ್ಕಳ ಊಟದ ಯೋಜನೆಯ ಅನ್ವಯ ಮಕ್ಕಳಿಗೆ ಯಾವ ರೀತಿಯ ಆಹಾರ ವಿತರಿಸಲಾಗುತ್ತದೆ. | ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯಲ್ಲಿ ಮೆನು ನಿಗದಿಪಡಿಸಲಾಗುವುದು. ಮೆನು ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಿರುತ್ತದೆ. ಸಾಮಾನ್ಯವಾಗಿ ಮಕ್ಕಳಿಗೆ ನೀಡುವ ಆಹಾರದ ವಿವರ ಈ ಕೆಳಕಂಡತಿದೆ<br>• 6 ತಿಂಗಳು – 3 ವರ್ಷದ ಮಕ್ಕಳು – ಪುಷ್ಟಿ ಪುಡಿ ರೂಪದ ನ್ಯೂಟ್ರಿಮಿಕ್ಸ್ ಆಹಾರ<br>• 3-6 ವರ್ಷದ ಮಕ್ಕಳು– ಚಿತ್ರಾನ್ನ, ರವೆ ಲಾಡು, ಅಕ್ಕಿ ಕಿಚಡಿ, ಮೊಳಕೆ ಬರಿಸಿದ ಹೆಸರುಕಾಳು, ಅನ್ನ ಸಾಂಬರ್. ಕ್ಷೀರಭಾಗ್ಯ ಯೋಜನೆಯಡಿ 5 ದಿನ ಹಾಲು ಮತ್ತು 2 ದಿನ ಮೊಟ್ಟೆ ನೀಡಲಾಗುತ್ತಿದೆ. |

| | | |
|---|---|---|
| ಇ | ರಾಜ್ಯದ ಮಕ್ಕಳ ಅಪೌಷ್ಠಿಕತೆಯ ಪ್ರಮಾಣ ಕಡಿಮೆ ಮಾಡಲು ಕೈಗೊಂಡ ಕ್ರಮಗಳೇನು? | ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಸಾಮಾನ್ಯ ಮಕ್ಕಳಿಗೆ ಪ್ರತಿ ದಿನ ರೂ. 8/-ರಂತೆ ಘಟಕ ವೆಚ್ಚ ಭರಿಸುತ್ತಿದ್ದು ತೀವ್ರ ಅಪೌಷ್ಠಿಕತೆವುಳ್ಳ ಮಕ್ಕಳಿಗೆ ರೂ. 12/-ರ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.<br><br>▪ 3 ತಿಂಗಳಿಂದ ರಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ.<br>▪ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ 150 ಎಂಎಲ್ ಕೆನೆಭರಿತ ಹಾಲವನ್ನು ನೀಡಲಾಗುತ್ತಿದೆ.<br>▪ ಅತೀ ಕಡಿಮೆ ತೂಕವುಳ್ಳ ಮಕ್ಕಳಿಗೆ ಹೆಚ್ಚುವರಿ ವಾರದಲ್ಲಿ 3ದಿನ ಮೊಟ್ಟೆ, 200 ಎಂಎಲ್ ಹಾಲು ಹಾಗೂ ಮೊಟ್ಟೆ ಉಪಯೋಗಿಸದ ಮಕ್ಕಳಿಗೆ 200 ಎಂಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ,<br>▪ ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರ್ಗಿ, ರಾಯಚೂರು ಕೊಪ್ಪಳ ಹಾಗೂ ಯಾದಗಿರಿ ಇಲ್ಲಿ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ಹೆಚ್ಚುವರಿ ವಾರದಲ್ಲಿ 3 ದಿನ ಮೊಟ್ಟೆ, 200 ಎಂಎಲ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ.<br><br>▪ ತೀವ್ರ ಅಪೌಷ್ಠಿಕ ಮಕ್ಕಳಿಗೆ ವೈದ್ಯಕೀಯ ವೆಚ್ಚ ಯೋಜನೆಯಡಿ ಔಷದಿ ಹಾಗೂ ಚಿಕಿತ್ಸಾ ಆಹಾರಕ್ಕಾಗಿ ( Therapeutic Food) ಪ್ರತಿ ಮಗುವಿಗೆ ವಾರ್ಷಿಕ ರೂ. 2000/- ಗಳಂತೆ ಭರಿಸಲಾಗುತ್ತಿದೆ.<br>▪ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಪೌಷ್ಠಿಕ ಪುನರ್ವಸತಿ ಕೇಂದ್ರ (NRC) ಗಳಲ್ಲಿ ಅಪೌಷ್ಠಿಕ ಮಕ್ಕಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 32 ಐಸಿಡಿ 2021

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.36 ಕ್ಕೆ

**ಅನುಬಂಧ-1**

## ಶಾಲಾ ಪೂರ್ವ ಮಕ್ಕಳ ಊಟದ ಯೋಜನೆಯಡಿ 2020-21 ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಹಾಗೂ ರಾಜ್ಯಾದ್ಯಂತ ಯೋಜನೆಯಡಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ಬಿಡುಗಡೆ (ರೂ. ಲಕ್ಷಗಳಲ್ಲಿ) | 6 ತಿಂಗಳು – 3 ವರ್ಷದ ಮಕ್ಕಳು | 3-6 ವರ್ಷದ ಮಕ್ಕಳು | ಗರ್ಭಿಣಿಯರು | ಬಾಣಂತಿಯರು | ಅಂಗನವಾಡಿ. ಕಾರ್ಯಕರ್ತೆಯರು | ಅಂಗನವಾಡಿ. ಸಹಾಯಕಿಯರು | ಒಟ್ಟು |
|---|---|---|---|---|---|---|---|---|---|
| 1 | ಬಾಗಲಕೋಟೆ | 5925.93 | 100208 | 73388 | 19406 | 18675 | 2221 | 2164 | 216062 |
| 2 | ಬೆಂಗಳೂರು(ಗ್ರಾ) | 1868.62 | 35055 | 20411 | 4952 | 4094 | 1229 | 1108 | 66849 |
| 3 | ರಾಮನಗರ | 1805.30 | 33975 | 20805 | 4378 | 4012 | 1543 | 1301 | 66014 |
| 4 | ಬೆಂಗಳೂರು(ನ) | 6441.65 | 136496 | 63472 | 13617 | 10425 | 2420 | 2329 | 228759 |
| 5 | ಬೆಳಗಾಂ | 13805.33 | 224075 | 163158 | 43135 | 40836 | 5294 | 5235 | 481733 |
| 6 | ಬಳ್ಳಾರಿ | 8117.92 | 133571 | 100918 | 27246 | 24432 | 2784 | 2715 | 291666 |
| 7 | ಬೀದರ್ | 5329.97 | 94724 | 46504 | 19779 | 19780 | 1893 | 1866 | 184546 |
| 8 | ವಿಜಯಪುರ | 6755.94 | 117491 | 84994 | 25735 | 25711 | 2313 | 2269 | 258513 |
| 9 | ಚಾಮರಾಜನಗರ | 2102.61 | 34155 | 24944 | 5726 | 5571 | 1421 | 1371 | 73188 |
| 10 | ಚಿಕ್ಕಮಗಳೂರು | 1797.26 | 27814 | 23073 | 5032 | 5168 | 1825 | 1667 | 64579 |
| 11 | ಚಿತ್ರದುರ್ಗ | 4396.62 | 66954 | 58487 | 12463 | 11764 | 2324 | 2208 | 154200 |
| 12 | ಮಂಗಳೂರು | 3634.63 | 61395 | 42928 | 12008 | 11563 | 2104 | 2084 | 132082 |
| 13 | ದಾವಣಗೆರೆ | 3883.27 | 66132 | 45132 | 12702 | 11798 | 1721 | 1656 | 139141 |
| 14 | ಧಾರವಾಡ | 4047.95 | 67031 | 50739 | 13877 | 12717 | 1505 | 1495 | 147364 |
| 15 | ಗದಗ | 2982.64 | 45933 | 37747 | 9240 | 8484 | 1166 | 1162 | 103732 |
| 16 | ಕಲಬುರ್ಗಿ | 7141.99 | 127986 | 85621 | 25579 | 26406 | 3098 | 3025 | 271715 |
| 17 | ಯಾದಗಿರಿ | 4215.30 | 66009 | 62232 | 14967 | 15168 | 1386 | 1336 | 161098 |
| 18 | ಹಾಸನ | 2320.23 | 39689 | 30456 | 8146 | 8176 | 2523 | 2248 | 91238 |
| 19 | ಹಾವೇರಿ | 4359.24 | 68932 | 58001 | 13334 | 12629 | 1918 | 1891 | 156705 |
| 20 | ಕೋಲಾರ | 3283.97 | 58091 | 30874 | 9404 | 9633 | 2061 | 1980 | 112043 |
| 21 | ಚಿಕ್ಕಬಳ್ಳಾಪುರ | 2659.92 | 54469 | 40301 | 7809 | 7847 | 1961 | 1848 | 114235 |
| 22 | ಕೊಡಗು | 821.36 | 16424 | 8845 | 3332 | 3107 | 871 | 848 | 33427 |
| 23 | ಕೊಪ್ಪಳ | 5375.96 | 74286 | 65610 | 14933 | 14445 | 1850 | 1800 | 172924 |
| 24 | ಮಂಡ್ಯ | 2986.59 | 53125 | 34098 | 9621 | 9259 | 2546 | 2240 | 110889 |
| 25 | ಮೈಸೂರು | 4534.35 | 82323 | 56495 | 14871 | 13731 | 2875 | 2706 | 173001 |
| 26 | ರಾಯಚೂರು | 7499.36 | 116255 | 94781 | 24220 | 22631 | 2664 | 2623 | 263174 |
| 27 | ಶಿವಮೊಗ್ಗ | 3276.65 | 55271 | 42251 | 8711 | 7718 | 2439 | 2125 | 118515 |
| 28 | ತುಮಕೂರು | 4655.16 | 76312 | 59231 | 13294 | 13082 | 4097 | 3576 | 169592 |
| 29 | ಉಡುಪಿ | 1795.29 | 29806 | 24517 | 5134 | 5577 | 1191 | 1191 | 67416 |
| 30 | ಉತ್ತರಕನ್ನಡ | 3128.57 | 45113 | 44190 | 9206 | 8646 | 2687 | 2530 | 112372 |
| ಒಟ್ಟು | | **130949.58** | **2209100** | **1594203** | **411857** | **393085** | **65930** | **62597** | **4736772** |

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ.36 ಕ್ಕೆ ಅನುಬಂಧ -2

## ಶಾಲಾ ಪೂರ್ವ ಮಕ್ಕಳ ಊಟದ ಯೋಜನೆಯ ಅನ್ವಯ ಮಕ್ಕಳಿಗೆ ನೀಡಲಾಗುತ್ತಿರುವ ಆಹಾರ ವಿವರ

## ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯಲ್ಲಿ ಮೆನು ನಿಗದಿಪಡಿಸಲಾಗುವುದು

****

- 6 ತಿಂಗಳು – 3 ವರ್ಷ ಮಕ್ಕಳು– ಗೋಧಿ ರವೆ, ಅಕ್ಕಿ, ಹೆಸರುಕಾಳು, ನ್ಯೂಟ್ರಿಮಿಕ್ಸ್ ಪುಡಿ
- 3–6 ವರ್ಷ ಮಕ್ಕಳು – ಚಿತ್ರಾನ್ನ, ರವೆ ಲಾಡು, ಅಕ್ಕಿ ಕಿಚಡಿ, ಮೊಳಕೆ ಬರಿಸಿದ ಹೆಸರುಕಾಳು, ಅನ್ನ ಸಾಂಬರ್
- ಪ್ರಾಯಪೂರ್ವ ಬಾಲಕಿಯರಿಗೆ – ಅಕ್ಕಿ, ಹೆಸರುಕಾಳು, ಗೋಧಿ
- **ಕ್ಷೀರ ಭಾಗ್ಯ** ಯೋಜನೆಯಡಿ 6 ತಿಂಗಳು – 6 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲೀ ಹಾಲು ನೀಡಲಾಗುತ್ತಿದೆ (15ಗ್ರಾಂ ಹಾಲಿನಪುಡಿ , 10 ಗ್ರಾಂ ಸಕ್ಕರೆ)
- 06 ತಿಂಗಳಿಂದ 3 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ, 3 ತಿಂಗಳಿನಿಂದ -6 ವರ್ಷದ ತೀವ್ರ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ತಿನ್ನದ ಮಕ್ಕಳಿಗೆ ವಾರದ 6 ದಿನ ಹಾಲು ನೀಡಲಾಗುತ್ತಿದೆ.
- 5 ಹಿಂದುಳಿದ ಜಿಲ್ಲೆಗಳಾದ ಬೀದರ, ಕಲಬುರ್ಗಿ, ರಾಯಚೂರು, ಕೊಪ್ಪಳ ಹಾಗೂ ಯಾದಗಿರಿ ಜಿಲ್ಲೆಗಳ 6 ತಿಂಗಳಿಂದ – 3 ವರ್ಷದ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 3 ದಿನ ಮೊಟ್ಟೆ ಹಾಗೂ 3–6 ವರ್ಷದ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ ವಾರದಲ್ಲಿ 5 ದಿನ ಮೊಟ್ಟೆ ನೀಡಲಾಗುತ್ತಿದೆ, ಮೊಟ್ಟೆ ತಿನ್ನದ ಮಕ್ಕಳಿಗೆ ವಾರದ 6 ದಿನ ಹಾಲು ನೀಡಲಾಗುತ್ತಿದೆ.
- 3–6 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ.